ಕವಿತೆ




## ಬಿ.ಆರ್. ಲಕ್ಷ್ಮಣರಾವ್

ಕಲೆ: ರೂಪಶ್ರೀ ಕಲ್ಲಿಗನೂರು




# ಏನೋ ಹೇಳುವುದಿತ್ತು

ಏನೋ ಹೇಳುವುದಿತ್ತು ನಿವೃತ್ತ ಅಪ್ಪನಿಗೆ
ನಿರ್ಗಮಿಸುವ ಮೊದಲು;
ಆದರೆ ಇರಲಿಲ್ಲ ನಮಗೆ ವ್ಯವಧಾನ
ಅದನ್ನು ಕೇಳಿಸಿಕೊಳ್ಳಲು.

ನನಗೋ ದಿನವಿಡೀ ಪಾಠ, ಪ್ರವಚನ,
ಸಂಜೆಯಾದರೆ ಅಸಾಧ್ಯ ದಣಿವು:
ಇನ್ನು ತಮ್ಮಂದಿರಿಗೋ ಅವರವರದೇ
ತಾಪತ್ರಯ ಹಲವು.

ಜೊತೆಗೆ ಅಪ್ಪ ಮೊದಲಿಂದಲೂ
ಮಾತಿನಲ್ಲಿ ಅತಿ ಧಾರಾಳಿ;
ಹಾಗಾಗಿ ಹೆದರಿ ಅಡಗುತ್ತಿದ್ದೆವು ನಾವು
ಎದುರಿಸಲಾಗದೆ ಆ ದಾಳಿ.

‘ಒಂದು ಸಂಜೆ ಬಿಡುವು ಮಾಡಿಕೊಳ್ಳಿ
ಸ್ವಲ್ಪ ಹೊತ್ತು ನೀವೆಲ್ಲ,
ಏನೋ ಹೇಳುವುದಿದೆ’ ಅಂದಿದ್ದರು ಅಪ್ಪ.
ಆ ಸಂಜೆ ಬರಲೇ ಇಲ್ಲ!

ಏನು ಹೇಳುವುದಿತ್ತೋ, ಪಾಪ, ಅಪ್ಪನಿಗೆ
ಕೊಡಬೇಕಿತ್ತು ಕೊಂಚ ವೇಳೆ,
ಅನ್ನಿಸುತ್ತಿದೆ ನನ್ನ ಖಿನ್ನ ಮನಸಿಗೀಗ
ನಾನೂ ನಿವೃತ್ತನಾದ ಮೇಲೆ.